# ಶ್ರೀರಾಮ ಮಹಿಮೆ

❖ **ಪುರಾಣಗಳಲ್ಲಿ** ಹೇಳಿದೆ: ರಾಮಚಂದ್ರ ಸಭೆಗೆ ಬಂದಾಗ, ಶತ ಸೂರ್ಯರು ಉದಯವಾದಂತಾಯಿತು ಎಂಬುದಾಗಿ. ಹಾಗಾದರೆ ಸಭಿಕರೆಲ್ಲ ಏಕೆ ಸುಟ್ಟು ಭಸ್ಮವಾಗಿ ಬಿಡಲಿಲ್ಲ? ಅದಕ್ಕೆ ಕಾರಣ, ಆತನ ಜ್ಯೋತಿ ಜಡ ಜ್ಯೋತಿ ಅಲ್ಲ. ಸೂರ್ಯೋದಯವಾದೊಡನೆ ಪದ್ಮಗಳು ಅರಳುವ ಹಾಗೆ ಇಡೀ ಸಭಿಕರ ಹೃತ್ಪದ್ಮ ಅರಳಲಾರಂಭಿಸಿದುವು.

*(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು. ೧೫೩)*



❖ **ಅವತಾರಪುರುಷ** ಅವತರಿಸಿ ಬಂದಾಗ ಅದು ಸಾಮಾನ್ಯ ಜನರಿಗೆ ಗೊತ್ತಾಗುವುದಿಲ್ಲ. ರಹಸ್ಯವಾಗಿ ಬರುತ್ತಾನೆ. ಎಲ್ಲೊ ಒಂದು ಐದಾರು ಮಂದಿ ಅಂತರಂಗ ಭಕ್ತರು ಮಾತ್ರ ಆತನನ್ನು ಗುರುತಿಸಬಲ್ಲರು. ರಾಮ ಪೂರ್ಣಬ್ರಹ್ಮ, ಪೂರ್ಣ ಅವತಾರ ಎಂಬುದು ಕೇವಲ ಹನ್ನೆರಡು ಜನ ಋಷಿಗಳಿಗೆ ಮಾತ್ರ ಗೊತ್ತಿತ್ತು. ಉಳಿದ ಋಷಿಗಳು ಆತನಿಗೆ ಹೇಳಿದರು : 'ಹೇ ರಾಮ, ನೀನು ದಶರಥನ ಪುತ್ರ ಎಂಬುದಾಗಿ ಮಾತ್ರ ನಮಗೆ ಗೊತ್ತಿದೆ.'

*(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು. ೧೫೩)*

❖ **ಒಮ್ಮೆ** ರಾಮಚಂದ್ರನಿಗೆ ತೀವ್ರ ವೈರಾಗ್ಯ ಬಂದುಬಿಟ್ಟಿತು. ಅದನ್ನು ನೋಡಿ ದಶರಥ ಬಹಳ ಚಿಂತಿತನಾಗಿ ವಸಿಷ್ಠನನ್ನು ಸಮೀಪಿಸಿ, ರಾಮ ಸಂಸಾರವನ್ನು ತ್ಯಾಗಮಾಡದ ಹಾಗೆ ಬುದ್ಧಿ ವಾದವೀಯಬೇಕೆಂದು ಬೇಡಿಕೊಂಡ. ವಸಿಷ್ಠ ರಾಮನ ಹತ್ತಿರಕ್ಕೆ ಬಂದು ನೋಡುತ್ತಾನೆ, ಆತ ವಿಮನಸ್ಕನಾಗಿ ಕುಳಿತಿದ್ದಾನೆ. ಅಂತರ್ಯದಲ್ಲಿ ತೀವ್ರ ವೈರಾಗ್ಯ ತುಂಬಿ ತುಳುಕಾಡುತ್ತಿದೆ. ವಸಿಷ್ಠ ಆತನಿಗೆ ಹೇಳಿದ: 'ನೀನು ಸಂಸಾರವನ್ನು ಏಕೆ ತ್ಯಾಗ ಮಾಡಬೇಕು? ಸಂಸಾರ ಆತನಿಂದ ಹೊರಗಿದೆಯೇನು? ನನ್ನೊಡನೆ ವಿಚಾರ ಮಾಡಿ ನೋಡು.' ರಾಮನ ಅನುಭವಕ್ಕೆ ಬಂತು, ಈ ಜಗತ್ತು ಪರಬ್ರಹ್ಮನಿಂದಲೇ ಉದ್ಭವವಾಗಿದೆ ಎಂದು. ಅದಕ್ಕಾಗಿ ಆತ ಸುಮ್ಮನೆ ಆಗಿಬಿಟ್ಟ.



*(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು. ೩೩೮)*

❖ **ಸಾಕ್ಷಾತ್** ಭಗವಂತನೇ ಆದ ಶ್ರೀರಾಮಚಂದ್ರ, ಲಕ್ಷ್ಮಣನ ಮುಂದೆ ಕೇವಲ ಎರಡೂವರೆ ಮೊಳ ದೂರದಲ್ಲಿ ನಡೆದುಹೋಗುತ್ತಿದ್ದ. ಅವರಿಬ್ಬರ ಮಧ್ಯೆ ಸೀತೆಯ ರೂಪವನ್ನು ಧರಿಸಿದ್ದ ಮಾಯೆ ನಡೆದು ಹೋಗುತ್ತಿದ್ದುದರಿಂದ ಲಕ್ಷ್ಮಣನ ರೂಪವನ್ನು ಧರಿಸಿದ್ದ ಜೀವ ಆ ಭಗವಂತನನ್ನು ನೋಡಲಾಗುತ್ತಿರಲಿಲ್ಲ. ಇಲ್ಲಿ ನೋಡು; ಈ ಚೌಕವನ್ನು ನನ್ನ ಮುಖದ ಮುಂದೆ ಹಿಡಿದುಕೊಳ್ಳುತ್ತೇನೆ. ನಾನು ಮಾತ್ರ ನಿನ್ನ ಹತ್ತಿರದಲ್ಲೇ ಇದ್ದರೂ ನೀನು ಮಾತ್ರ ನನ್ನನ್ನು ನೋಡಲಾಗುವುದಿಲ್ಲ. ಇದೇ ರೀತಿ ದೇವರು ಎಲ್ಲಕ್ಕಿಂತಲೂ ಹತ್ತಿರದಲ್ಲೇ ಇದ್ದಾನೆ. ಆದರೂ ಈ ಮಾಯೆಯ ಆವರಣದ ದೆಸೆಯಿಂದ ಆತನನ್ನು ನೋಡಲಾಗುವುದಿಲ್ಲ.



*(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು. ೧೨೭–೨೮)*

'ಶ್ರೀರಾಮಕೃಷ್ಣ ವಚನವೇದ'ದಿಂದ